

# ಮಾತು ಮರೆಸುವ ಮಾಗೋಡು!

**ಇರುಳಿನ ಮಾಯಕತೆಯಲ್ಲಿ ಹಾಗೂ ಹಗಲಿನ ನೆರಳು ಬೆಳಕಿನ ಕಣ್ಣಾಮುಚ್ಚಾಲೆಯಲ್ಲಿ ಮಾಗೋಡು ಜಲಪಾತ ಹೇಗೆ ಕಾಣಿಸುತ್ತದೆ? ಆ ಅಪೂರ್ವ ಅನುಭವವನ್ನು ರಸವತ್ತಾಗಿ ಕಟ್ಟಿಕೊಟ್ಟಿರುವ ಈ ಬರಹದ ಓದು, ಮಾಗೋಡಿನ ತುಂತುರಿನೊಂದಿಗೆ ದಬದಬ ಸದ್ದನ್ನೂ ಸಹೃದಯರ ಎದೆಗೆ ದಾಟಿಸುವಷ್ಟು ಚಿತ್ರವತ್ತಾದುದು.**

■ ವಿ. ಹರಿನಾಥ ಬಾಬು

ವಾರವಾದರೂ ಮಾಗೋಡು ಜಲಪಾತದ ಸದ್ದು ಎದೆಯೊಳಗೆ ಮಾರ್ದನಿಗೊಳ್ಳುತ್ತಿದೆ. ಎಷ್ಟೋ ವರ್ಷಗಳಿಂದ ಮಾಗೋಡು ಮಡಿಲಲ್ಲಿ ಅದರ ಲಾಲಿ ಹಾಡು ಕೇಳುತ್ತಾ ಒಂದಿಡೀ ದಿನ ಕಳೆಯಬೇಕೆಂದುಕೊಂಡವನಿಗೆ ಕೊನೆಗೂ ಕಾಲ ಕೂಡಿ ಬಂತು. ಗೆಳೆಯರೂ ಜೊತೆಯಾದರು. ಕಲಘಟಗಿ ಹತ್ತಿರದ ಒಂದು ಡಾಬಾದಲ್ಲಿ ಸೊಂಪಾಗಿ ಊಟ ಮಾಡಿ ಮಾಗೋಡಿನ ಎದೆಯ ಗೂಡು ಸೇರಿದಾಗ ಸಂಜೆ ಮಬ್ಬುಗತ್ತಲೆಯ ಏಳು ಗಂಟೆ. ಯಲ್ಲಾಪುರ ದಾಟಿ ಮಾಗೋಡು ದಾರಿಗೆ ಹೊರಳಿದಾಗ ದಾರಿಯಲ್ಲಿ ಕರೆಂಟು ಕಂಬದಿಂದ ಕಡಿದುಬಿದ್ದಿದ್ದ ಕರೆಂಟು ಲೈನು ಭಯ ಹುಟ್ಟಿಸಿತು. ಡ್ರೈವರ್ ಮಹಾಶಯ ಅದರ ಚೂರೂ ಭಯವಿಲ್ಲದೆ ಅದರ ನಡುವೆ ಕಾರು ನುಸುಳಿಸಿಕೊಂಡು ಬಂದಾಗ ಜೀವ ಬಾಯಿಗೆ ಬಂದಿತ್ತು. ದಾರಿ ಕಪ್ಪು ಕಾಳಿಂಗನಂತೆ ಅಂಕುಡೊಂಕಾಗಿ ಉದ್ದಕ್ಕೆ ಮಲಗಿತ್ತು. ಕೊನೆಯ ಮೂರು ಕಿ.ಮೀ. ದಾರಿಯಂತೂ ಸಂಪೂರ್ಣ ಹದಗೆಟ್ಟು ಇದು ಮಾಗೋಡು ಜಲಪಾತದ ದಾರಿಯೋ ಯಮಪುರಿಯ ಬಟ್ಟೆಯೋ ಎಂದು ಭಯ ಹುಟ್ಟಿಸುತ್ತಿತ್ತು.

ಕಾಯ್ದಿರಿಸಿದ್ದ 'ಗೆಸ್ಟ್ ಹೌಸ್' ತಲುಪುತ್ತಿದ್ದಂತೆಯೇ ಕಾರಿನಿಂದಿಳಿದವರಿಗೆ 'ದಬದಬದಬದ...' ಸದ್ದು ಕಿವಿಗಡಚಿಕ್ಕುವಂತೆ ಕೇಳಿಸತೊಡಗಿತು. ಇಡೀ ರಾತ್ರಿ ಮತ್ತು ಒಂದಿಡೀ ಹಗಲು ಆ ಧ್ಯಾನಸ್ಥ ನಾದಕ್ಕೆ ಮೈ ಮನವೆಲ್ಲಾ ಕಿವಿಯಾಗಿ ಕುಣಿಯಲು ಸಜ್ಜಾಗಿತ್ತು.

ಆಕಾಶ–ಭೂಮಿ ಒಂದಾಗಿ ನಿಂತಂತೆ ಮಳೆಮೋಡ, ಇಬ್ಬನಿ ಜಲಪಾತವನ್ನು ತನ್ನ ಒಡಲೊಳಗೆ ಬಚ್ಚಿಟ್ಟುಕೊಂಡಿತ್ತು. ಬರೀ 'ದಬದಬದಬದಬ' ಸದ್ದು ಬಿಟ್ಟರೆ ಆ ಕತ್ತಲಲ್ಲಿ ಎಷ್ಟೇ ಕಣ್ಣಗಲಿಸಿ, ಬ್ಯಾಟರಿಯ ಬೆಳಕು ಬೀರಿ ನೋಡಿದರೂ ಒಂದೆಳೆಯಷ್ಟೂ ನೀರ ದರ್ಶನವಿಲ್ಲ. ಕಣಿವೆಯ ನೋಟವಿಲ್ಲ. ಮಳೆಗಾಲದಲ್ಲಿ ಹಾಡ ಹಗಲೇ ಅವಿತು ಕುಳಿತುಕೊಳ್ಳುವ ಜಲಪಾತ ಕರಾಳ ರಾತ್ರಿಯಲ್ಲಿ ಕಾಣಲು ಸಾಧ್ಯವೇ? ಜಗತ್ತಿನ ಕೊನೆ ಎಂಬುದು ಏನಾದರೂ ಇದ್ದರೆ ಬಹುಶಃ ಅದು ಇದೇ ಇರಬೇಕು ಎಂಬಂತೆ ಭಾಸವಾಗುತ್ತಿತ್ತು.

ತಾಸೆರಡುತಾಸು ಜಲಪಾತದ ಎದೆಯ ಬಡಿತಕ್ಕೆ ಸಾಕ್ಷಿಯಾಗಿ ಊಟಕ್ಕೆ ಬಂದು ಊಟ ಮುಗಿಸಿ ಮತ್ತೆ ಹೊರಗಡೆ ಕುರ್ಚಿಯಲ್ಲಿ ಧ್ಯಾನಕ್ಕೆ ಕುಳಿತವನಂತೆ ಆರಾಮ ಕುಳಿತೆ. ಓಡೋಡಿ ಬರುವ ಮಳೆಯ ರಪರಪ ನಡಿಗೆಯ ಸದ್ದಿಗೆ 'ಮಳೆಯೆಂದರೆ ಹೀಗೂ ಬರುತ್ತಾ' ಎಂದು ಗಾಬರಿಯಾದೆ. ಬಿಸಿಲನಾಡು ಬಳ್ಳಾರಿಯ ಬರಗಾಲವನ್ನಷ್ಟೇ ಯಥೇಚ್ಛ ಉಂಡವನು, ಅಲ್ಲಿ ಬೀಳುವ ಹತ್ತಿಪ್ಪತ್ತು ನಿಮಿಷದ ಮಳೆಯೇ ಭಾರೀ ಮಳೆಯೆಂದುಕೊಂಡವನು, ಈ